**<u>1 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಟಿ.ನರಸೀಪುರ.</u>**

**<u>ಸಿ ಸಿ ಸಂಖ್ಯೆ : 44/2026</u>**

**ಪಿರ್ಯಾದಿ** : ರಾಜ್ಯದ ಪರವಾಗಿ ತಲಕಾಡು ಪೋಲೀಸ್ ಠಾಣೆ,

**ವಿರುದ್ಧ**

**ಆರೋಪಿಗಳು** : ಮಹದೇವಸ್ವಾಮಿ ಬಿನ್ ಲೇಟ್ ಮಹದೇವಯ್ಯ,
48 ವರ್ಷ,
ಪರಿಣಮಿಪುರ ಗ್ರಾಮ, ತಲಕಾಡು ಹೋಬಳಿ,
ಟಿ.ನರಸೀಪುರ ತಾಲ್ಲೂಕು.

**<u>ಆಪಾದನೆ</u>**

ಶ್ರೀಮತಿ ನಿವೇದಿತಾ ಎನ್. 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆಪಾದನೆ ಏನೆಂದರೆ,

ದಿನಾಂಕ 28/10/2025 ರಂದು ಸಂಜೆ 4.45 ಗಂಟೆ ಸಮಯಲ್ಲಿ, ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಪರಿಣಾಮಿಪುರ ಗ್ರಾಮದ ಮುಖ್ಯ ರಸ್ತೆಯ ಬದಿಯಲ್ಲಿ, ಆರೋಪಿಯಾದ ನೀವು ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೆ, ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅವಕಾಶ ಮಾಡಿಕೊಟ್ಟು, 90 ಮಿಲಿಯ 13 ಅಕ್ರಮವಾಗಿ ಹಾಗೂ ಯಾವುದೇ ಪರವಾನಿಗೆ ಇಲ್ಲದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅವಕಾಶ ಮಾಡಿಕೊಟ್ಟು 90 ಮಿಲಿಯ 13 ಹೈವಾರ್ಡ್ಸ್ ಚೀಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಮತ್ತು 90 ಮಿಲಿಯ 5 ಖಾಲಿ ಹೈವಾರ್ಡ್ಸ್ ಚೀಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.**15(A) ಮತ್ತು 32(3)** ರ

ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಅಪಾದಿಸಲಾಗಿದೆ.

ಪ್ರಶ್ನೆ: 1: ಆರೋಪಣೆ ಓದಿ ಹೇಳಿದುದು ಅರ್ಥವಾಯಿತೇ?
ಉತ್ತರ :

ಪ್ರಶ್ನೆ: 2: ಶಿಕ್ಷೆಗೆ ಒಪ್ಪುತ್ತೀರೋ ಅಥವಾ ನಿಮ್ಮದೇನಾದರೂ ವಿಚಾರಣೆಯಾಬೇಕಾ ?
ಉತ್ತರ :

ಈ ಮೇಲಿನ ಆರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಂತ ಬರಹದಲ್ಲಿ ದಾಖಲೆ ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿಃ 19/01/2026

**ಓ ಹೇ ಕೇ ಸ ಇ ಓ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**

ಪ್ರಕರಣವನ್ನು ಕರೆಯಲಾಯಿತು. ಆರೋಪಿಯು ಹಾಜರಿದ್ದು ದೋಷಾರೋಪಣಾ ಪತ್ರವನ್ನು ಒದಗಿಸಲಾಯಿತು. ಆರೋಪಣೆಯನ್ನು ಆರೋಪಿಗೆ ಓದಿ ಹೇಳಲಾಗಿ, ಅರ್ಥೈಸಿಕೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡಿರುಸತ್ತಾರೆ. ಅವರ ತಪ್ಪೊಪ್ಪಿಗೆಯು ಸ್ವ-ಇಚ್ಛೆಯಿಂದ ಕೂಡಿದ್ದೆಂದು ಮನವರಿಕೆಯಾಗಿದೆ.

ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.15(**A**) ಮತ್ತು 32(3)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕೆ ಆರೋಪಿಗೆ ಶಿಕ್ಷೆ ವಿಧಿಸಿದ್ದು ರೂ.1000/- ದಂಡವನ್ನು ಪಾವತಿಸತಕ್ಕದ್ದು ಎಂದು ಆದೇಶಿಸಿರುತ್ತೇನೆ.

**Call before Lok adalath**.

**Call on** 14/03/2026.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**